ಲೇಬರ್‌ಗೆ, ಒಂದು ರೂಪಾಯಿ ಎಪ್ಪತ್ತೈದು ಪೈಸ ಅನ್‌ಸ್ಕಿಲ್ಡ್‌ಗೆ ಕೊಡುತ್ತಿದ್ದಾರೆ. ಈಗ ಅವರು ಹೇಳುವುದಕ್ಕಿಂತಲೂ ಮುಂಚೆ ನಾನೇ ಹೇಳುತ್ತೇನೆ. ಸ್ಕಿಲ್ಡ್ ಲೇಬರ್‌ಗೆ ಮೂರು ರೂಪಾಯಿ, ಅನ್‌ಸ್ಕಿಲ್ಡ್ ಲೇಬರ್‌ಗೆ ಎರಡು ರೂಪಾಯಿಗೆ ಏರಿಸಲಕ್ಕ ತೀರ್ಮಾನದ ಬಗ್ಗೆ ಆದಷ್ಟು ಜಾಗ್ರತೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಈಗ ತಾವು ೩ ರೂಪಾಯಿ ಎರಡೂವರೆ ರೂಪಾಯಿ ಕೊಡತಕ್ಕದ್ದು ಅಷ್ಟು ಸರಿಯಾಗಿ ಕಾಣಿಸುವುದಿಲ್ಲ. ಹೊರಗಡೆ ಫರ್‌ನಿಚರ್ ಮತ್ತು ಜಮಖಾನೆ ಮಾಡುವವರ ಲೇಬರ್ ಬಹಳ ಚಾಸ್ತಿ ಇದೆ. ಕೈಮಗ್ಗದ ಮೇಲೆ ಕೆಲಸ ಮಾಡತಕ್ಕ ಕುಶಲಕರ್ಮಿಗಳಿಗೆ ಜೈಲಿನಲ್ಲಿರ ಶಕ್ತವರಿಗೆ ಕಡಿಮೆ ಹಣ ಕೊಡುವುದು ಉಚಿತವಲ್ಲ. ಹೊರಗಡೆ ಎಷ್ಟು ಹಣ ಕೊಡುತ್ತಾರೆ ಅದರಲ್ಲಿ ಅರ್ಧದಷ್ಟಾದರೂ ಕೊಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಅಧ್ಯಕ್ಷರೆ, ಇಲ್ಲಿಯವರೆಗೆ ಸಂಭಾವನೆ ಕೊಡತಕ್ಕ ಉದ್ದೇಶ ಒಂದು ಸ್ಪಷ್ಟ ಮಾಗಿಲ್ಲ. ಅವರು ಜೈಲಿನಲ್ಲಿ ಖೈದಿಗಳಾಗಿರಬೇಕಾದರೆ, ಅವರ ಮನಸ್ಸು ಪರಿವರ್ತನೆಗೊಂಡು ನಾವು ಸಹ ಮುಂದೆ ಸಮಾಜದಲ್ಲಿ ಒಳ್ಳೆಯವರಾಗಬೇಕು ಎನ್ನುವ ಸಂಸ್ಕಾರಕ್ಕೆ ಮಾಡುತ್ತಿದ್ದೇವೆ. ಅವರು ಆ ಕೆಲಸವನ್ನು ಅನಂತರ ಸಮಾಜದಲ್ಲಿ ಮುಂದುವರಿಸಿಕೊಂಡು ಹೋಗಬಹುದು. ಈಗ ಅವರು ಜೈಲಿನಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಆ ಕೆಲಸವನ್ನು ಇಷ್ಟೇ ದಿವಸದಲ್ಲಿ, ಇಷ್ಟೇ ಗಂಟೆಯಲ್ಲಿ ಮಾಡಿ ಮುಗಿಸಬೇಕೆಂದು ಇಲ್ಲ. ಈಗ ಮಾನ್ಯ ಕಾಂತ ಅವರು ಹೊರಗಡೆ ಕೊಡತಕ್ಕದ್ದಕ್ಕಿಂತ ಅರ್ಧ ಕೊಡ ಬೇಕೆಂದು ಹೇಳಿದ್ದಾರೆ, ಆದು ಸರ್ಕಾರದಲ್ಲಿ ಇಲ್ಲ. ಈಗಾಗಲೇ ನಾನು ಎಷ್ಟು ಹೆಚ್ಚಿಸುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಕೆ. ಕಾಂತ.—ಹೊಸ ಮನುಷ್ಯನಾಗಿ ತಯಾರು ಮಾಡಬೇಕೆಂದು ಸರ್ಕಾರದ ಇಚ್ಛೆ ಇದ್ದ ಹೋಲಿ ಅವನು ಹೊರಗೆ ಹೋಗುವಾಗ ಹಣ ಕೈಯಲ್ಲಿ ಇದ್ದರೆ ಒಳ್ಳೆಯ ಕೆಲಸ ಮಾಡಬಹುದು. ನೀವು ಅವನಿಗೆ ಕೊಡತಕ್ಕ ಸಂಭಾವನೆ ಕಡಿಮೆ ಇದ್ದರೂ ಮಾರಾಟ ಮಾಡತಕ್ಕ ವಸ್ತುಗಳ ಬೆಲೆ ಹೊರಗಡೆಯಂತರಿಗೆ ಹೋಲಿಕೆ ಮಾಡಿದರೆ ಹೆಚ್ಚೇ ಇರುತ್ತದೆ. ಆದುದರಿಂದ, ಕುಶಲ ಕರ್ಮಿಯೊಬ್ಬ ಜೈಲಿನಿಂದ ಹೊರಗೆ ಹೋದಾಗ ಅವನು ಒಂದು ಪಪ್ಪಿಲೂಂನ್ನು ಕೊಂಡುಕೊಳ್ಳಬೇಕೆಂದಿರುತ್ತಾನೆ. ಅದಕ್ಕಾದರೂ ಅವನಿಗೆ ಹಣ ಬೇಕಾಗುತ್ತದೆ.

ಶ್ರೀ ವೀರಣ್ಣ.—ಸ್ವಾಮಿ. ಈಗಾಗಲೇ ಇದಕ್ಕೆ ನಾನು ಉತ್ತರ ಹೇಳಿದ್ದೇನೆ.

ಬೆಂಗಳೂರು ಹಾಗೂ ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಗಲಭೆಗಳು

೪೫. (೬೯) ಶ್ರೀಮತಿ ಮುಕ್ತರುನ್ನಿಸಾ (ನರಸಿಂಹರಾಜ) ಶ್ರೀ ಗೋಪಾಲ ಮುಕುಂದ ಕಾನಡೆ, (ಸಿರಸಿ) ಶ್ರೀ ಬಿ. ಏನ್. ಇದಿನಬ್ಬ (ಉಳ್ಳಾಲ) ಹಾಗೂ ಶ್ರೀ ಎಂ. ಏಂ. ಹಿಂದಸಗೇರಿಯವರು (ಹುಬ್ಬಳ್ಳಿ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧) ದಿನಾಂಕ ೭–೧೨–೧೯೬೮ರಂದು ಬೆಂಗಳೂರಿನಲ್ಲಿ ಹಾಗೂ ದಿನಾಂಕ ೮–೧೨–೧೯೬೮ರಂದು ಮೈಸೂರಿನಲ್ಲಿ ನಡೆದ ಗಲಭೆಗಳಿಗೆ ಕಾರಣಗಳೇನು ?

೨) ಈ ಗಲಭೆಗಳಿಗೆ ಸಂಬಂಧಿಸಿದಂತೆ ಎಷ್ಟು ಜನ ಮೃತರಾದರು ಹಾಗೂ ಎಷ್ಟು ಜನ ಗಾಯಗೊಂಡರು ?

೩) ಈ ಗಲಭೆಗೆ ಕಾರಣಕರ್ತರಾದವರ ಮೇಲೆ ತೆಗೆದುಕೊಂಡಿರುವ ಕ್ರಮವೇನು ?

೪) ಈ ಗಲಭೆಗೆ ಕಾರಣರಾದ ಡೆಕ್ಕನ್ ಹೆರಾಲ್ಡ್‌ನ ಬೆಂಗಳೂರು ದೈನಿಕದ ವರಹಗಾರರ ಮೇಲೆ ಸರಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

೧) ದಿನಾಂಕ ೭–೧೨–೧೯೬೮ರ ಡೆಕ್ಕನ್ ಹೆರಾಲ್ಡ್ ಇಂಗ್ಲೀಷ್ ಪತ್ರಿಕೆಯ ಭಾನುವಾರದ ಪುರವಣಿಯಲ್ಲಿ "ಮಹಮ್ಮದ್ ದಿ ಈಡಿಯಟ್" ಎಂಬ ಸಣ್ಣ ಕಥೆಯು ಮುದ್ರಣವೇ ಕಾರಣವಾಗಿ ಮತೀಯ ಭಾವನೆಗಳನ್ನು ಪ್ರಚೋದಿಸಿದ್ದರಿಂದ ಒಂದು ಜನಾಂಗದ ಪ್ರತಿಭಟನೆ.

೨) ಪೋಲೀಸು ಗೋಲೀಬಾರಿನಲ್ಲಿ ಬೆಂಗಳೂರಿನಲ್ಲಿ ೧೧ ಜನರು, ಮೈಸೂರಿನಲ್ಲಿ ೪ ಜನರು ಹಾಗೂ ತುಮಕೂರಿನಲ್ಲಿ ಒಬ್ಬರು ಮೃತರಾದರು. ಬೆಂಗಳೂರಿನಲ್ಲಿ ೩೯, ಮೈಸೂರಿನಲ್ಲಿ ೧೮ ಹಾಗೂ ತುಮಕೂರಿನಲ್ಲಿ ೭ ಜನರ ಪೋಲೀಸು ಗೋಲೀಬಾರ್‌ನಲ್ಲಿ ಗಾಯಗೊಂಡಿದ್ದಾರೆ.

೩) ಈ ಗಲಭೆಗೆ ಸಂಬಂಧಿಸಿದ ಒಟ್ಟು ೧೧೧೪ ಜನರನ್ನು ಬಂಧಿಸಿ ಒಟ್ಟು ೫೧೦ ಕೇಸುಗಳನ್ನು ಇವರ ವಿರುದ್ಧ ದಾಖಲು ಮಾಡಲಾಗಿದೆ.

೪) ಈ ವಿಷಯವು ಸರಕಾರದ ಪರಿಶೀಲನೆಯಲ್ಲಿದೆ.

SMT. MUKHTARUNNISA.—When there was firing in Bangalore on Sunday the 7th and the same was going on 8th also, how the concerned authorities gave permission to take out a similar type of procession on 8th December at Mysore although the authorities were aware of the consequences? How can the concerned official give permission for taking out procession in the absence of any responsible person or leader or MLAs, MPs, MLCs who were away from the city? Is it not wrong on the part of the concerned official to give permission to take out procession by irresponsible persons? Did the concerned authorities mark the procession route? When the Deputy Commissioner received the memorandum in the office, why he did not take steps to disperse the procession from there only? Why the procession was diverted to pass through small lanes?

ಶ್ರೀ ಬಿ. ರಾಚಯ್ಯ.—ಎಲ್ಲ ಜನರೂ ತಕ್ಷಣ ಗುಂಪು ಸೇರಿ ಪ್ರೊಸೆಷನ್ ಹೋಗಬೇಕೆಂದು ಹೇಳಿದಾಗ ನೀವು ಎಲ್ಲಿದ್ದೀರಿ ಅಲ್ಲಿಗೆ ನಾನು ಬರುತ್ತೇನೆಂದು ಎಷ್ಟು ಹೇಳಿದರೂ ಜನರು ಕೇಳದೇ ಹೋದಾಗ ಜಿಲ್ಲಾಧಿಕಾರಿಗಳು ಟೌನ್‌ಹಾಲ್ ಬಳಿಗೆ ಬಂದು ಆ ಮೆಮೋರಾಂಡಂನ್ನು ಅವರಿಂದ ತೆಗೆದು ಕೊಂಡಿದ್ದಾರೆ. ಜನರು ತಪ್ಪು ಭಾವನೆಯನ್ನು ತೊಡಿಕೊಳ್ಳುವುದಕ್ಕೆಂದು ಎಲ್ಲ ರೋಡುಗಳಿಂದಲೂ ಬಂದಿದ್ದಾರೆ. ಆದರೆ ಇಂಥಿಂಥ ಕಡೆ ಪ್ರೊಸೆಷನ್ ಬರುತ್ತೇವೆಂದು ಆ ಜನರು ಹೇಳಿಲ್ಲಿಲ್ಲ. ಸಾಧ್ಯವಾದಷ್ಟು ಪುಟ್ಟಿಗೆ ಅವರನ್ನು ವಾಪಸ್ ಕಳುಹಿಸಿಕೊಡುವುದಕ್ಕೆ ಉನ್ನತ ಅಧಿಕಾರಿಗಳು ಎರಡೂ ಕಡೆ ಇದ್ದುಕೊಂಡು ಅವರನ್ನು ಕರೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಪರವಾನಿಗೆ ಇರಲಿಲ್ಲ. ಪ್ರೊಸೆಷನ್ ಹೋಗಲಿಕ್ಕೆ ಅವಕಾಶ ಇರಲಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ತಪ್ಪುಲ್ಲಿ ಆರಿಕೆ ಮಾಡಿಕೊಳ್ಳುವುದೇನೆಂದರೆ ನಿನ್ನೆಯ ದಿವಸ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಆದರೆ ಇನ್ನೊಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕಾದ್ದರಿಂದ ನಾನು ಕಳುಹಿಸಿಕೊಟ್ಟಿರತಕ್ಕಂಥ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಾಗಲಿಲ್ಲ. ಈಗ ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ ರೂಲ್ ನಂಬರ್ ೬೮ರ ಕೆಳಗೆ ಈ ವಿಚಾರದ ಬಗ್ಗೆ ಒಂದು ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ವಿವರವಾಗಿ ಚರ್ಚೆ ಮಾಡಲು ಅವಕಾಶವಾಗುತ್ತದೆ. ಅನೇಕ ಜನ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡುವವರಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈವತ್ತು ಪೇಪರ್‌ಮಾನೆಯಲ್ಲೂ ಇದೇ ವಿಷಯ ಬರತಕ್ಕಂಥ ಸಂದರ್ಭವಿರುತ್ತದೆ, ಮತ್ತು ಇದಕ್ಕೆ ಶಿದ್ಧಿಪಡಿಯೂ ಸಹ ಇದೆ. ಆದ್ದರಿಂದ ಇದನ್ನು ನಾಳೆಯ ದಿವಸ ತೆಗೆದುಕೊಳ್ಳಬಹುದು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನಾನು ಹೇಳುವುದೇನೆಂದರೆ ಮಾನ್ಯ ಸಚಿವರು ನಾಳೆಯ ದಿವಸ ಚರ್ಚೆ ಮಾಡಲಿಕ್ಕೆ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ನಾಳೆಯ ದಿವಸ ಒಂದು ಗಂಟೆ ಕಾಲ ಅವಕಾಶವನ್ನು ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾ ಈ ಘಟನೆಯ ಸಂದರ್ಭದಲ್ಲಿ ಸತ್ತ ಕುಟುಂಬಗಳಿಗೆ ಪರಿಹಾರವನ್ನು ಕೊಡುವ ವಿಚಾರದ ಬಗ್ಗೆ ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಪ್ರಜಾವಾಣಿ ಪತ್ರಿಕೆಯವರು ಎಷ್ಟು ಹಣವನ್ನು ಕೊಟ್ಟಿರುತ್ತಾರೆ, ನೀವು ಎಷ್ಟು ಹಣವನ್ನು ಕೊಟ್ಟಿರುತ್ತೀರಿ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಬಿ. ರಾಚಯ್ಯ.—ಪರಿಹಾರವನ್ನು ಕೊಟ್ಟಿದ್ದೇವೆ. ಉತ್ತರ ಇದೆ. ಡಿಟೇಲ್ಸ್ ಓದ ಬೇಕೆಂದರೆ ಓದುತ್ತೇನೆ.

ಮೂರು ವರ್ಷಗಳಿಂದ ಹೆಚ್ಚಾಗಿ ವರ್ಗಾವಣೆಯಾಗದ ಆರಕ್ಷಕ ಅಧೀಕ್ಷಕರುಗಳು

೪೪೪ (೬೬) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಒಂದೇ ಸ್ಥಳದಲ್ಲಿ ಮೂರು ವರ್ಷಕ್ಕಿಂತ ಹೆಚ್ಚಾಗಿ ಸೇವೆ ಸಲ್ಲಿಸಿದ್ದರೂ ವರ್ಗಾವಣೆಯಾಗದೆ ಇರುವ ಪೋಲೀಸ್ ಸೂಪರಿಂಟೆಂಡೆಂಟರುಗಳ ಸಂಖ್ಯೆ ಎಷ್ಟು ?

ಆ) ಅದಕ್ಕೆ ಕಾರಣವೇನು ?

ಇ) ದೂರುಗಳು ಬಂದಿರುವ ಪೋಲೀಸ್ ಸೂಪರಿಂಟೆಂಡೆಂಟರುಗಳ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಮೂರು.

ಆ) ಆಡಳಿತಾತ್ಮಕ ಕಾರಣಗಳಿಂದ ಹಾಗೂ ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ವರ್ಗಾಯಿಸಿಲ್ಲ.

ಇ) ಒಬ್ಬ ಪೋಲೀಸ್ ಸೂಪರಿಂಟೆಂಡೆಂಟ್‌ರವರ ಬಗ್ಗೆ ಮಾತ್ರ ದೂರು ಬಂದಿದ್ದು ವಿಚಾರಣೆ ನಡೆಸಿದ ನಂತರ ಈ ದೂರು ಸತ್ಯಕ್ಕೆ ದೂರವಾದುದೆಂದು ತಿಳಿದು ಬಂದಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಯಾವ ಸೂಪರಿಂಟೆಂಡೆಂಟ್ ಮೇಲೂ ದೂರು ಬಂದಿಲ್ಲ, ಒಬ್ಬರ ಮೇಲೆ ಮಾತ್ರ ಬಂದಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿರುತ್ತಾರೆ. ಅವರು ಯಾರೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಚಿತ್ರದುರ್ಗ ಜಿಲ್ಲೆ ಪೋಲೀಸ್ ಸೂಪರಿಂಟೆಂಡೆಂಟ್ ಮೇಲೆ ಬಂದಿತ್ತು. ಅವರು ದಲಿತ ವರ್ಗದವರ ಮೇಲೆ ಹೆಚ್ಚಿನ ಸಹಾನುಭೂತಿಯನ್ನು ಹೊಂದಿಲ್ಲ ಎನ್ನುವ ರೀತಿಯಲ್ಲಿ ದೂರು ಬಂದಿತ್ತು. ಅದನ್ನು ವಿಚಾರ ಮಾಡಲಾಗಿ ಅದು ಸತ್ಯಕ್ಕೆ ದೂರವಾಗಿತ್ತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಧಾರವಾಡ ಪೋಲೀಸ್ ಸೂಪರಿಂಟೆಂಡೆಂಟ್ ಬಗ್ಗೆ ದಿನಾಂಕ ೧೦-೩-೮೪ ರಂದು ಜಮೀನು ವಿಚಾರದ ಬಗ್ಗೆ ಎಲ್ಲ ಹರಿಜನರು ಅಪ್ಲಿಕೇಷನ್ ಕೊಟ್ಟಿದ್ದರು. ಅದರ ಬಗ್ಗೆ ಇಲ್ಲಿಯವರೆಗೂ ತೀರ್ಮಾನವಾಗಿಲ್ಲ. ತಮಗೂ ಮತ್ತು ಮುಖ್ಯ ಮಂತ್ರಿಗಳಿಗೂ ಅಪ್ಲಿಕೇಷನ್ ಕೊಟ್ಟಿದ್ದರು. ಅದರ ಬಗ್ಗೆ ಉತ್ತರವನ್ನು ಕೊಡಬೇಕೆಂದರೆ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇಲ್ಲಿಗೆ ಅವರು ಬಂದು ೩ ವರ್ಷದ ಮೇಲೆ ಆಗಿಲ್ಲ. ಒಂದು ವರ್ಷವಾಗಿದೆ ಅಷ್ಟೆ. ೩ ವರ್ಷ ಆಗಿರುವುದು ಯಾರ್ಯಾರು ಬಂದು ಎಂದು ಕೇಳಿರುವುದರಿಂದ ಈ ವಿಷಯ ಪ್ರಸ್ತಾಪಕ್ಕೆ ಬರಲಿಲ್ಲ, ಈ ವಿಷಯವನ್ನು ಪ್ರತ್ಯೇಕವಾಗಿ ಕೇಳಬಹುದು.

ಶ್ರೀ ಕೆ.ಹೆಚ್. ಪಾಟೀಲ್.—ಅವರಿಗೆ ಕೆಟ್ಟದ್ದು ಮಾಡಿ ಎಂದಂ ಹೇಳುವುದಿಲ್ಲ. ಆ ಪೋಲೀಸ್ ಇನ್ಸ್‌ಪೆಕ್ಟರ್ ಮೆ ಲೆ ಏನೂ ಕ್ರಮ ಕೈಗೊಳ್ಳದೆ ಹರಿಜನರ ಜಮೀನು ಎತ್ತಿ ಹಾಕಲಿಕ್ಕೆ ಸಾಮೀಲಾಗಿರುವವರ ಬಗ್ಗೆ ತನಿಖೆ ಮಾಡಿ ಎಂದು ಇವತ್ತಾದರೂ ಟೆಲಿಫೋನ್ ಮೂಲಕ ಸೂಚನೆ ನೀಡುತ್ತೀರಾ ? ಶಿರಹಟ್ಟಿ ತಾಲ್ಲೂಕಿನ ಪರಸಾಪುರ ಗ್ರಾಮದ ಜನ ಅಸೆಂಬ್ಲಿಗೂ ಅಪ್ಲಿಕೇಷನ್ ಕೊಟ್ಟಿದ್ದಾರೆ. ರೆವಿನ್ಯೂ ಖಾತೆಯಿಂದ ೨ ತಿಂಗಳೊಳಗೆ ವಿಲೇವಾರಿ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ.